

ಜಾಣರ ಪೆಟ್ಟಿಗೆ

# ಸುದೀಪ್ ಉತ್ತರ ನೀಡುತ್ತಾರಾ?

ಇತ್ತೀಚೆಗೆ 'ಬಿಗ್ ಬಾಸ್'ನಲ್ಲಿ 'ಮುಚ್ಕೊಂಡಿರಿ' ಎಂಬ ಪದ ಬಳಸಿದ ಸ್ಪರ್ಧಿ ಅರವಿಂದ್‌ಗೆ ಬುದ್ಧಿವಾದ ಹೇಳುತ್ತಾ ಒಂದು ಕಾಲ್ಪನಿಕ ಕಥೆ ಹೇಳಿದರು.

ಅದರಲ್ಲಿ 'ಸುದೀಪ್ ಒಂದಷ್ಟು ಪರಿಚಿತನೊಂದಿಗೆ ಮಾತನಾಡುವಾಗ ಮಾತಿನ ಚಕಮಕಿಯಾಗುತ್ತದೆ. ಆ ವ್ಯಕ್ತಿ ಸುದೀಪ್‌ಗೆ 'ಮುಚ್ಕೊಂಡಿರಿ' ಎಂದರಂತೆ. ಸುದೀಪ್ ಆ ವ್ಯಕ್ತಿಗೆ ತಮ್ಮ ಆಕ್ಷೇಪ ವ್ಯಕ್ತಪಡಿಸಿದರಂತೆ. ಅದಕ್ಕೆ ಆ ವ್ಯಕ್ತಿ ಅದನ್ನ ನಾನು ಗೌರವದಿಂದ ಹೇಳಿದೆ ಎಂದರಂತೆ. ಆದರೆ ಅದನ್ನೆಲ್ಲ ಕೇಳಿಸಿಕೊಂಡ ಸುದೀಪ ಅವರ ಅಂಗರಕ್ಷಕ ಆ ವ್ಯಕ್ತಿಯ ಕೆನ್ನೆಗೆ ಹೊಡೆದರಂತೆ. ಸುದೀಪ್ ತಮ್ಮ ಸಿಬ್ಬಂದಿಗೆ ಏಕೆ ಹೊಡೆದಿದ್ದು? ಅದು ತಪ್ಪಲ್ವಾ ಅಂತ ಕೇಳಿದರಂತೆ. ಆ ಅಂಗರಕ್ಷಕ ನಾನೂ ಗೌರವದಿಂದಲೇ ಬಾರಿಸಿದೆ ಎಂದು ಸಮಜಾಯಿಷಿ ನೀಡಿದರಂತೆ'. ಅಲ್ಲಿಗೆ ಕಾಲ್ಪನಿಕ ಕಥೆ ಮುಗಿಯುತ್ತದೆ.

ಈ ಕಥೆಯ ಉದಾಹರಣೆ ಏಕೆ ಕೊಟ್ಟರು? ತಪ್ಪು ಪದ ಬಳಕೆ ಮಾಡಿದರೆ ಅದಕ್ಕೆ ಹಲ್ಲೆಯೇ ಸರಿಯಾದ ಉತ್ತರ ಎಂಬ ಮಾರ್ಗದರ್ಶನವನ್ನು ಸುದೀಪ ಅವರು ಬಿಗ್ ಬಾಸ್ ಸ್ಪರ್ಧಿಗಳಿಗೆ ಮತ್ತು ವೀಕ್ಷಕರಿಗೆ ನೀಡಿದರಾ? ಸುದೀಪ್ ಹಲ್ಲೆ ಮಾಡದಿದ್ದರೂ ಅಂಗರಕ್ಷಕರಾದ ಅಂತವರ ವರ್ತನೆಗೆ ಯಾರು ಹೊಣೆಗಾರರು? ಸುದೀಪ್ ಇದಕ್ಕೆ ಉತ್ತರ ನೀಡುತ್ತಾರಾ?

—ಶ್ರೇಯಾಂಶ್ ರಾವ್, ಬೆಂಗಳೂರು

**ವೀಕ್ಷಕರೂ ಕಾದಾಡಬೇಕೇ?:** ಕಲರ್ಸ್ ಕನ್ನಡದಲ್ಲಿನ 'ಬಿಗ್‌ಬಾಸ್' ನೋಡಲು ತಲೆನೋವಾಗಿದೆ. ಇದು ಜನರಿಗೆ ಯಾವ ಸಂದೇಶವನ್ನು ಕೊಡುತ್ತದೆ. ಇದರಿಂದ ಜನರಿಗೆ ಆಗುವ ಉಪಯೋಗವಾದರೂ ಏನು? ಬರೀ ಜಗಳ ಜಗಳ ಇದನ್ನು ನೋಡುವ ವೀಕ್ಷಕರೂ ಇದನ್ನು ನೋಡಿ ಕಾದಾಟ ಮಾಡಬೇಕಾ?

ಹೆಣ್ಣಿನ ಬಗ್ಗೆ ಅವಹೇಳನ ಮಾಡುವುದು ಸರಿಯಲ್ಲ. ಆದರೆ ಇಲ್ಲಿ ಗಾಸಿಪ್ ಮಾಡುವುದು, ಪರನಿಂದನೆ ಎದ್ದು ಕಾಣಿಸುತ್ತದೆ. ಇದನ್ನು ಬಿಟ್ಟು ಯಾವುದಾದರೊಂದು ಪೌರಾಣಿಕ ಅಥವಾ ಸಾಮಾಜಿಕ ಧಾರಾವಾಹಿಯನ್ನಾದರೂ ಪ್ರಾರಂಭಿಸಿ. 'ಎದೆ ತುಂಬಿ ಹಾಡುವೆನು' ಎಂತಹ ಅದ್ಭುತ ಕಾರ್ಯಕ್ರಮ. ಮನಸ್ಸಿಗೆ ಸಂತೋಷವನ್ನು ಉಂಟು ಮಾಡುವಂತೆ ಕಾರ್ಯಕ್ರಮ ರೂಪಿಸಲಿ ಎನ್ನುವುದು ನನ್ನ ಆಸೆ.

—ಬಿ.ಎಸ್. ಮುಳ್ಳೂರ, ಹಲಗತ್ತಿ

ವಾರದ ಪತ್ರ

## ಖುಷಿಕೊಟ್ಟ ಜವಾರಿ ಮಾತು

ಸಾಮಾನ್ಯವಾಗಿ ಸಿನಿಮಾ, ರಿಯಾಲಿಟಿ ಶೋ ಹಾಗೂ ಧಾರಾವಾಹಿಗಳಲ್ಲಿ ಉತ್ತರ ಕರ್ನಾಟಕದ ಜನರನ್ನು, ಅಲ್ಲಿಯ ಭಾಷೆಯನ್ನು ಹಾಸ್ಯಾಸ್ಪದವಾಗಿ ತೋರಿಸುತ್ತಾರೆ. ಆದರೆ, 'ಗಿಣಿರಾಮ' ಧಾರಾವಾಹಿಯಲ್ಲಿ ಇದ್ಯಾವುದು ಇಲ್ಲ.

ಸ್ಥಳೀಯ ಕಲಾವಿದರನ್ನೇ ತೆಗೆದುಕೊಂಡು ಸ್ಥಳೀಯ ಭಾಷಾಸೊಗಡಿಗೆ ಹೊಂದಿಸಿದ್ದಾರೆ. ಯಾವುದೇ ದ್ವಂದ್ವಾರ್ಥ ಸಂಭಾಷಣೆ ಇಲ್ಲದಷ್ಟು ಶುದ್ಧತೆಯನ್ನು ಕಾಪಾಡಿದ್ದಾರೆ. ಕ್ಯಾಮೆರಾದ ಕಣ್ಣಿಂದ ಅಲ್ಲಿನ ಹಳ್ಳಿಗಳ ಸೊಬಗನ್ನು ಬಹಳ ಸೊಗಸಾಗಿ ಸೆರೆಹಿಡಿದಿದ್ದಾರೆ. ಆಯಿ ಸಾಹೇಬ್, ಶಿವರಾಮ್ ತಂದೆ ಹಾಗೂ ವಿನಾಯಕ ಮಾಸ್ತರ ನಟನೆ ಅದ್ಭುತವಾಗಿ ಮೂಡಿಬರುತ್ತಿದೆ. ಮಹತಿ ಮನೆಯವರು ಬೆಂಗಳೂರಿನ ಭಾಷೆಗೆ ಉಳಿದವರ ಉತ್ತರ ಕರ್ನಾಟಕದ ಸೊಗಡಿನ ಸಂಭಾಷಣೆ ಕೇಳಲು ಖುಷಿಯಾಗುತ್ತದೆ.

—ಟಿ.ಎನ್. ಜಯಂತಿ ಶಾಸ್ತ್ರೀ ಮೈಸೂರು

**ಆಹಾರ ಪೋಲಾಗದಿರಲಿ:** ಕಲರ್ಸ್ ಕನ್ನಡದ 'ಬಿಗ್ ಬಾಸ್'ನಲ್ಲಿ ತಲೆಗೆ ಮೊಟ್ಟೆ ಒಡೆಯುವ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಈ ಆಟದಲ್ಲಿ ಹತ್ತು ಸ್ಪರ್ಧಿಗಳು ಸುಮಾರು 500 ಮೊಟ್ಟೆಗಳನ್ನು ಹೊಡೆದುಕೊಂಡು ಒಡೆಯುತ್ತಾರೆ. ಅತಿ ಹೆಚ್ಚು ಮೊಟ್ಟೆಗಳನ್ನು ಒಡೆದ ಐವರನ್ನು ವಿಜೇತರೆಂದು ಪರಿಗಣಿಸಲಾಗಿತ್ತು.

ಮೊಟ್ಟೆ ಆಹಾರ ಪದಾರ್ಥ ಆಟದ ರೂಪದಲ್ಲಿ ನಷ್ಟ ಮಾಡಿದ್ದು ಸರ್ವಾಥಾ ಸರಿಯೆನಿಸಲಿಲ್ಲ. ಒಪ್ಪೊತ್ತೂಟಕ್ಕೂ ತತ್ವಾರವಿರುವಂತಹ ಬಡಜನರಿರುವ ನಮ್ಮ ದೇಶದಲ್ಲಿ ಆಟದ ಸಲುವಾಗಿ ಆಹಾರ ಪೋಲು ಮಾಡಿರುವುದು ರಾಷ್ಟ್ರೀಯ ನಷ್ಟ. ಇಂತಹ ಆಟಗಳಿಗೆ ಬದಲು ಆಯೋಜಕರು ಬೇರೆ ಆಟಿಕೆ ವಸ್ತುಗಳನ್ನು ಬಳಸಬಹುದಲ್ಲವೆ?

—ರಮಣ್ ಶೆಟ್ಟಿ ರೆಂಜಾಳ್, ಮುಂಬೈ

## ಉಲ್ಟಾ ಪಲ್ಟಾ ಆಟ

ಕಲರ್ಸ್ ಕನ್ನಡದ 'ಕನ್ನಡತಿ'ಯಲ್ಲಿ ಹರ್ಷ, ಭುವಿ ಹಾಗೂ ವರು, ಪೂರ್ವಿ ಜೋಡಿಯಾಗಿ ಚೌಕಾಬಾರ ಆಟವಾಡುತ್ತಾರೆ. ಆಡುವವರು ಎದುರು ಬದುರಾಗಿ ಕುಳಿತುಕೊಂಡು ಆಡುವುದು ಆಟದ ನಿಯಮ. ಆದರೆ ದಾರಾವಾಹಿಯಲ್ಲಿ ಪಕ್ಕದಲ್ಲಿ ಕುಳಿತಿರುತ್ತಾರೆ, ಹಾಗೆ ಕುಳಿತರೆ ಕಾಯಿ ನಡೆಸುವುದೂ ಕಷ್ಟ.

ಭುವಿ ಹರ್ಷನಿಗೆ ಆಟ ಹೇಳಿಕೊಡುವಾಗ ಕಾಯನ್ನು ಬಲದಿಂದ ಎಡಕ್ಕೆ ನಡೆಸಬೇಕೆನ್ನುತ್ತಾಳೆ. ಆದರೆ ಆಟ ಆಡುವುದು ವಿರುದ್ಧವಾಗಿ. ಸುಂದರ ಧಾರಾವಾಹಿಯಲ್ಲಿ ಇಂತಹ ದೋಷಗಳು ಆಗಬಾರದು. ಇದು ಆಟದ ಬಗ್ಗೆ ತಪ್ಪು ಸಂದೇಶ ನೀಡುವ ಜೊತೆಗೆ ಅವಮಾನ ಮಾಡಿದಂತೆ ಆಗುತ್ತದೆ.

—ಎಸ್.ವಿ. ಗೋಪಾಲ್ ರಾವ್, ಬೆಂಗಳೂರು

**ಇದ್ದಿದ್ದೂ ಕೆಟ್ಟುಹೋಯ್ತು:** 'ಹಾಳೂರಿಗೆ ಉಳಿದವನೇ ಗೌಡ' ಎಂಬ ಗಾದೆಯಂತೆ ಧಾರಾವಾಹಿಗಳ ಮಧ್ಯ ಇದ್ದುದರಲ್ಲೇ 'ಕನ್ನಡತಿ' ಉತ್ತಮ. ಸಹಜ ಸಂಭಾಷಣೆ ಮತ್ತು ನಟನೆಯನ್ನು ಹೊಂದಿದೆ. ಆದರೆ ಇತ್ತೀಚೆಗೆ ಅದೂ ಅಸಂಬದ್ಧ ಸನ್ನಿವೇಶಗಳ ಆಗರವಾಗಿದೆ.

ದೊಡ್ಡ ಕಂಪನಿಯ ಸಿಇಒ ಒಬ್ಬ ಎಲ್ಲ ಕೆಲಸ ಕಾರ್ಯ ಬಿಟ್ಟು ಯಾರದೋ ಮನೆಯ ರಿಪೇರಿ ಕೆಲಸಗಳನ್ನು ಮಾಡುತ್ತ ಕುಳಿತಿರುವುದು ಹಾಸ್ಯಾಸ್ಪದ. ಪೂರ್ವಿಯ ಪಾತ್ರದ ಮೂಲಕ ತಪ್ಪು ಸಂದೇಶ ನೀಡುತ್ತಿದ್ದಾರೆ. ಬೇಗನೆ ಕಥೆಯನ್ನು ಒಳ್ಳೆಯ ದಾರಿಗೆ ತಂದರೆ ವೀಕ್ಷಕ ಬಚಾವ್!

—ಗಿರೀಶ್ ಕುಲಕರ್ಣಿ, ಬೆಂಗಳೂರು

**ಕನ್ನಡತಿ ಮತ್ತು ಉಪನ್ಯಾಸ:** ಹಿಂದೊಮ್ಮೆ 'ಪ್ರೊಫೆಸರ್' ಎಂಬ ಕನ್ನಡ ಸಿನಿಮಾದ ವಿಮರ್ಶೆಯೊಂದು ಪತ್ರಿಕೆಯಲ್ಲಿ ಪ್ರಕಟವಾಗಿತ್ತು.

'ಚಿತ್ರದ ನಾಯಕ ಒಬ್ಬ ಪ್ರೊಫೆಸರ್! ಈತ ಪಾಠ ಒಂದನ್ನು ಬಿಟ್ಟು ಉಳಿದದ್ದನ್ನು ಎಲ್ಲಾ ಮಾಡಿದ್ದಾನೆ'.

ಕಲರ್ಸ್‌ನ 'ಕನ್ನಡತಿ'ಗೂ ಇದೇ ವಿಮರ್ಶೆ ಅನ್ವಯಿಸುತ್ತದೆ. ಇದರ ನಾಯಕಿ ಕನ್ನಡ ಉಪನ್ಯಾಸಕಿ. ಈಕೆಯೂ ಸಹ ಪಾಠ ಮಾಡುವುದೊಂದನ್ನು ಬಿಟ್ಟು ಉಳಿದದ್ದನ್ನೆಲ್ಲಾ ಮಾಡುತ್ತಾಳೆ!

—ಪಿ.ಜೆ. ರಾಘವೇಂದ್ರ, ಮೈಸೂರು

**ಲಸಿಕೆ ಜಾಗೃತಿ:** ಕಲರ್ಸ್ ಕನ್ನಡದ 'ಕನ್ನಡತಿ'ಯಲ್ಲಿ ಕೊರೊನಾ ವಿರುದ್ಧ ಲಸಿಕೆ ಪಡೆಯಲು ಹಿಂಜರಿಯುವ ಜನಸಾಮಾನ್ಯರಲ್ಲಿ ಇರುವ ಆತಂಕ–ಗೊಂದಲವನ್ನು ಹೋಗಲಾಡಿಸಲು ಮಾಡಿದ ಪ್ರಯತ್ನ ಮೆಚ್ಚುವಂತಹದ್ದು.

ರಾಮಪ್ರಸಾದ್ ಅಂಕಲ್, ಸೀತಾ ಆಂಟಿಗೆ ವ್ಯಾಕ್ಸಿನೇಷನ್ ಹಾಕಿಸಲು ಹರ್ಷ ನೋಂದಣಿ ಮಾಡಿಸಿ ಲಸಿಕಾ ಕೇಂದ್ರಕ್ಕೆ ಕರೆತಂದಾಗ ನಡೆದ ಸಂಭಾಷಣೆ ಕೂಡ ಚೆನ್ನಾಗಿತ್ತು. ವ್ಯಾಕ್ಸಿನ್ ಪಡೆಯಲು ಎಲ್ಲರಿಗೂ ಪ್ರೇರಣೆ ನೀಡಿದಂತಾಗಿದೆ. ಬಹುತೇಕರಿಗೆ ಟೀವಿ ಧಾರಾವಾಹಿಗಳೇ ಮನೋರಂಜನೆ.

—ರಘುನಾಥರಾವ್ ತಾಪ್ಸೆ, ದಾವಣಗೆರೆ

### ಹಾಸ್ಯ ಧಾರಾವಾಹಿ ಬರಲಿ

ಕನ್ನಡ ಧಾರಾವಾಹಿಗಳು ದ್ವೇಷ, ತ್ರಿಕೋನ ಪ್ರೇಮ ಕಥೆ, ಅತ್ತೆ ಸೊಸೆಯ ಕಚ್ಚಾಟ, ಮಲತಾಯಿಯನ್ನು ಕೆಟ್ಟದಾಗಿ ತೋರಿಸುವುದು, ಹಾಲಿನಲ್ಲಿ ವಿಷ ಬೆರೆಸುವುದು, ಸುಪಾರಿ ಕೊಡುವುದನ್ನು ನೋಡಿ ಪ್ರೇಕ್ಷಕರು ಯಾವ ಒಳ್ಳೆಯ ಸಂದೇಶ ಪಡೆಯುವರು ?

ಇವುಗಳಿಗಿಂತ ಹಾಸ್ಯ ಧಾರಾವಾಹಿಗಳು ಬರಲಿ ಮನಕ್ಕೆ ರಂಜನೆ ನೀಡಲಿ.

—ಶ್ರೀ ಧರ ರಾಯಸಂ